ಕೊಟ್ಟಿದ್ದಾರೆ? ನಾನು ಸಹಕಾರಿ, ನನಗೂ ಗೊತ್ತಿದೆ. ಆದುದರಿಂದ 64 ಎನ್‌ಕ್ವೈರಿ ಮಾಡುವು ದಾಗಲಿ ಮತ್ತೊಂದಾಗಲಿ ಅಧಿಕಾರಿಗಳಿಗೆ ಇವುಗಳ ಮೇಲೆ ಹಿಡಿತ ಇಲ್ಲ. ಆ ಹಿಡಿತ ತಪ್ಪಿ ಹೋಗಿರುವುದರಿಂದ ಸಿ.ಓ.ಡಿ.ಗೆ ಹಾಕಬೇಕು. ಅವರು ಸಿ.ಓ.ಡಿ.ಗೆ ಹಾಕಿದರೆ ಅವರಿಗೂ ಕೂಡ ನೀವು ಸರ್ಕಾರಕ್ಕೆ 3 ತಿಂಗಳಲ್ಲಿ ವರದಿ ಕೊಡಬೇಕೆಂದು ಹೇಳಿ ಕೊಡಬೇಕೇ ವಿನಹ ಸುಮ್ಮನೆ ಕೊಟ್ಟರೆ ಆಗುವುದಿಲ್ಲ. ನೀವು 64 ಎನ್‌ಕ್ವೈರಿ ಒಂದೇ ತಾನೇ ನೀವು ಮಾಡುವುದು.

ಉಪಾಧ್ಯಕ್ಷರು :- ನೀವು ಸರ್ಕಾರದ ಗಮನ ಸೆಳೆದಿದ್ದೀರಿ, ಅವರು ಗಮನ ಹರಿಸಿದ್ದಾರೆ.

ಶ್ರೀ ಎಚ್. ಶಿವಪ್ಪ :- 64 ಎನ್‌ಕ್ವೈರಿಯ ಒಂದು ವಿಪರ್ಯಾಸ ಏನೆಂದರೆ, 3 ವರ್ಷವಾಗಿದೆ 64 ಎನ್‌ಕ್ವೈರಿ ಆಗಿ ಅದಕ್ಕೆ ಸೆಕ್ಷನ್ 70ರ ಪ್ರಕಾರ ಡಿಕ್ರಿ ಪಾಸ್ ಮಾಡುವುದಕ್ಕೆ 3 ವರ್ಷ ಬೇಕಾಗಿದೆ. ಆದ್ದರಿಂದ 64 ಎನ್‌ಕ್ವೈರಿ ಎಂಬುದು ಏನಿದೆ it is a force, ಎಂದು ಹೇಳಬಹುದು. It is not a speedy action.

ಶ್ರೀ ಸಿ. ಬೈರೇಗೌಡ :- ಇದು ಸಹಕಾರ ಸಂಘಗಳ ಕಾಯಿದೆ ಕಲಂ 64ರ ಪ್ರಕಾರ ವಿಚಾರಣೆ ನಡೆಯತಕ್ಕದ್ದು ಅಲ್ಲ. ಇದಕ್ಕೆ ಇಲಾಖೆಯ ಒಬ್ಬ ಜವಾಬ್ದಾರಿ ಇರತಕ್ಕ ಅಧಿಕಾರಿ ಯನ್ನು ನೇಮಿಸಿ ಆ ಇಲಾಖಾಧಿಕಾರಿ ಮೂಲಕ ಸಿಸಿಎ. ರೂಲ್ಸ್ ಏನಿದೆ ಅದರ ಪ್ರಕಾರ ವಿಚಾರಣೆ ನಡೆಸುತ್ತೇವೆ. ರೂಲ್ 64 ಪ್ರಕಾರ ವಿಚಾರಣೆ ಅಲ್ಲ. ಸಹಕಾರ ಸಂಘಗಳ ಕಾಯಿದೆ ಯಿಂದ ಪ್ರತ್ಯೇಕಗೊಳಿಸಿ ಇಲಾಖಾ ವಿಚಾರಣೆ ನಡೆಸುವುದಕ್ಕೆ ಸರ್ಕಾರ ತೀರ್ಮಾನ ಮಾಡಿ ಮಾಡಿಸುತ್ತದೆ. ಆದ್ದರಿಂದ 6 ತಿಂಗಳು ಕಾಲಾವಕಾಶ ಬೇಕೆಂದು ಮಾನ್ಯ ಸಚಿವರು ಕೇಳಿದ್ದಾರೆ. ಆದಕ್ಕೆ ಮಾನ್ಯ ಸದಸ್ಯರು ಒಪ್ಪಬೇಕೆಂದು ವಿನಂತಿಸುತ್ತೇನೆ.

(2) ಹರಪನಹಳ್ಳಿ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿನ ತೊಂದರೆ.

ಶ್ರೀ ಡಿ. ನಾರಾಯಣ ದಾಸ್ (ಹರಪನಹಳ್ಳಿ) :- ಮಾನ್ಯ ಉಪಾಧ್ಯಕ್ಷರೇ, ಹರಪನ ಹಳ್ಳಿ ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಸರ್ಕಾರದ ವತಿಯಿಂದ ಮಂಜೂರಾದ ಬೋರ್‌ವೆಲ್‌ಗಳನ್ನು ಖಾಸಗಿ ಜಮೀನುಗಳಲ್ಲಿ ಕೊರೆಯಿಸಿ ಅಕ್ರಮವಾಗಿ ನೀರಾವರಿ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಗ್ರಾಮೀ ಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+**ಶ್ರೀ ಎಂ. ಪಿ. ಪ್ರಕಾಶ್** (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ :

ಹರಪನಹಳ್ಳಿ ತಾಲ್ಲೂಕಿನ ಚನ್ನಾಪುರ, ಕಡೇಕಲ್ ತಾಂಡಾ, ರಗ್ಗಿಬಸಾಪುರ ತಾಂಡಾ, ಪುಣಬಘಟ್ಟ ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಮಂಜೂರಾದ ಬೋರ್‌ವೆಲ್‌ಗಳನ್ನು ಖಾಸಗಿ ಯವರ ಜಮೀನಿನಲ್ಲಿ ಕೊರೆಯಿಸಿ, ಅಕ್ರಮವಾಗಿ ನೀರಾವರಿ ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಸರ್ಕಾರದ ಗಮನ ಸೆಳೆದಿರುತ್ತಾರೆ.

ಈ ಮೇಲ್ಕಂಡ ಗ್ರಾಮಗಳಲ್ಲಿ ಈ ಕೆಳಗಿನಂತೆ ಮೂವತ್ನಾಲ್ಕು ಕೊಳವೆ ಬಾವಿಗಳನ್ನು ಹಾಕಿಸಲಾಗಿದೆ.

1)	ಚನ್ನಾಪುರ	7
2)	ಕಡೇಕಲ್ ತಾಂಡಾ	2
3)	ದಗ್ಗಿ ಬಸಾಪುರ	10
4)	ಚಿಕ್ಕಮಟ್ಟಿ ತಾಂಡಾ	7
5)	ಪುಣಭಘಟ್ಟತಾಂಡಾ	8
	ಒಟ್ಟು	34

ಕುಡಿಯುವ ನೀರಿನ ಯೋಜನೆಯಡಿ ಸಾರ್ವಜನಿಕರಿಗೆ ನೀರು ಕುಡಿಯಲು ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಈ ಗ್ರಾಮಗಳಲ್ಲಿ ಖಾಸಗಿ ವ್ಯಕ್ತಿಗಳ ಜಮೀನುಗಳಲ್ಲಿ ಕುಡಿಯುವ ನೀರಿನ ಬೋರ್‌ವೆಲ್‌ಗಳನ್ನು ಕೊರೆಯಲಾಗಿದ್ದು, ಅವುಗಳನ್ನು ಅಕ್ರಮವಾಗಿ ನೀರಾವರಿಗಾಗಿ ಉಪಯೋಗ ಮಾಡುತ್ತಿರುವ ಬಗ್ಗೆ ಜಿಲ್ಲಾಧಿಕಾರಿ ಮತ್ತು ಆಡಳಿತಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ದಿನಾಂಕ 22-8-93 ರಂದು ಸರ್ಕಾರಕ್ಕೆ ಜಂಟಿ ವಿಚಾರಣಾ ವರದಿ ಸಲ್ಲಿಸಿ, ಖಾಸಗಿ ಜಮೀನಿನಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಬೋರ್‌ವೆಲ್‌ಗಳನ್ನು ಕೊರೆಯಲಾಗಿದ್ದು ಮತ್ತು ಖಾಸಗಿ ಜಮೀನುಗಳಲ್ಲಿ ಪೈಪ್‌ಲೈನ್ ಹಾಕಲಾಗಿದ್ದು, ಇವುಗಳನ್ನು ಸರ್ಕಾರದ ಹಣದಿಂದ ಮಾಡಲಾಗಿದ್ದು, ಮೇಲ್ನೋಟಕ್ಕೆ ತನಿಖೆಯಿಂದ ಕಂಡು ಬಂದಿದೆಯೆಂದು ಬಳ್ಳಾರಿ ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಮತ್ತು ಜಿಲ್ಲಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾಡಿದ ಜಂಟೀ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.

ಮೇಲ್ಕಾಣಿಸಿದ ಕಾಮಗಾರಿ ನಿರ್ವಹಣೆಯಲ್ಲಿ ಅನೇಕ ಅಧಿಕಾರಿ : ನೌಕರರು ಜವಾಬ್ದಾರರಾಗಿರುವುದರಿಂದ, ಪ್ರತಿಯೊಬ್ಬರ ಜವಾಬ್ದಾರಿಯ ಪ್ರಮಾಣ ಹಾಗೂ ದುರುಪಯೋಗ ಆಗಿದೆಯೆನ್ನಲಾದ ಸರ್ಕಾರಿ ಹಣದ ಮೊತ್ತದ ಬಗ್ಗೆ ಸೂಕ್ತ ತನಿಖೆಯಿಂದ ಮಾತ್ರ ಕಂಡುಹಿಡಿಯಲು ಸಾಧ್ಯವೆಂದು ವರದಿ ಮಾಡಿರುತ್ತಾರೆ.

ಖಾಸಗಿ ಜಮೀನಿನಲ್ಲಿ ಬೋರ್‌ವೆಲ್ ತೆಗೆಸಿರುವುದು ಹಾಗೂ ಖಾಸಗೀ ಜಮೀನಿನಲ್ಲಿ ಪೈಪ್‌ಲೈನ್ ಹಾಕಿರುವುದು ಮತ್ತು ಈ ಕಾಮಗಾರಿಗಳಿಗಾಗಿ ಸರ್ಕಾರೀ ಹಣದ ಉಪಯೋಗ ಮಾಡಿರುವುದು ಒಂದು ಗುರುತರವಾದ ಅಪಾದನೆಯಾಗಿರುವುದರಿಂದ, ಈ ಅವ್ಯವಹಾರಕ್ಕೆ ಜವಾಬ್ದಾರರಾಗಿರುವ ಅಧಿಕಾರಿ : ನೌಕರರುಗಳು ಹಾಗೂ ನಷ್ಟವಾದ ಸರ್ಕಾರಿ ಹಣದ ಮೊತ್ತ ಎಷ್ಟು ಎಂಬುದನ್ನು ಕಂಡುಹಿಡಿಯಲು ಸರ್ಕಾರದಿಂದ ತನಿಖೆ ನಡೆಸುವುದು ಸೂಕ್ತವೆಂದು ನಿರ್ಧರಿಸಿ, ಸದರೀ ಅವ್ಯವಹಾರದ ಬಗ್ಗೆ ಸಿಸಿಎ ನಿಯಮಾವಳಿ ನಿಯಮ 14 (ಎ) (1)ರ ಪ್ರಕಾರ ಕರ್ನಾಟಕ ಲೋಕಾಯುಕ್ತಕ್ಕೆ ದಿನಾಂಕ 25-11-93 ರಂದು ವರದಿ ಕಳುಹಿಸಲಾಗಿದೆ. ಕರ್ನಾಟಕ ಲೋಕಾಯುಕ್ತರಿಂದ ಈ ಬಗ್ಗೆ ವರದಿ ನಿರೀಕ್ಷಿಸಲಾಗಿದೆ.

ಈ ಬಗ್ಗೆ ಮಾನ್ಯ ನಾರಾಯಣ ದಾಸ್ ಅವರು ಮತ್ತು ಅಲ್ಲಿರುವಂಥ ಹರಪನಹಳ್ಳಿ

ತಾಲ್ಲೂಕಿನ ಅನೇಕ ಸಾರ್ವಜನಿಕರು ಹೇಳಿದ ಹಾಗೆ ಕ್ಷೇತ್ರವನ್ನು ಪ್ರತಿನಿಧಿಸಿದ್ದಂಥ ಹಿಂದಿನ ಶಾಸಕರು ತಮ್ಮ ಹೊಲಗಳಲ್ಲಿ ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ. ಅವರೆಲ್ಲರೂ ಕೂಡ ತಮ್ಮ ಹೊಲಗಳನ್ನು ಖಾಸಗಿಯಾಗಿ ನೀರಾವರಿ ಮಾಡಿಕೊಳ್ಳುವುದಕ್ಕೆ ಸರ್ಕಾರಿ ಹಣದ ದುರುಪಯೋಗವಾಗಿದೆ ಎಂಬ ಅಪಾದನೆಗಳನ್ನು ಮಾಡಿದ ಮೇಲೆ ಈ ವಿಚಾರದ ಬಗ್ಗೆ ಜಿಲ್ಲಾ ಪಂಚಾಯಿತಿಯಲ್ಲಿ ಕೂಡ ಚರ್ಚೆಯಾಗಿದೆ. ಮತ್ತೆ ಇದಕ್ಕಾಗಿ ಜಿಲ್ಲಾಧಿಕಾರಿಗಳು ಹಾಗೂ ಇವರು ಕೊಟ್ಟಿರುವ ವರದಿಯ ನಂತರ ಮೇಲ್ಮನೆಯಲ್ಲಿ ಚರ್ಚೆಯಾಗಿ ಇದನ್ನು ಆ ಕಾಲದಲ್ಲಿ ಇದ್ದ ಒಬ್ಬ ಶಾಸಕರನ್ನು ರಕ್ಷಣೆ ಮಾಡಬೇಕೆಂಬ ಕಾರಣಕ್ಕಾಗಿ ಹಿಂದಿನ ಸರ್ಕಾರ ಈ ಒಂದು ಇಡೀ ವಿಚಾರವನ್ನು ಲೋಕಾಯುಕ್ತಕ್ಕೆ ಕಳುಹಿಸಿಕೊಟ್ಟಿದೆ. ಲೋಕಾಯುಕ್ತದಲ್ಲಿ ಬಹಳ ತಡವಾಗಿದೆ. ಇದಕ್ಕಾಗಿ ಮತ್ತೆ ನಾವು ಮತ್ತೆ ಒಂದು ಜ್ಞಾಪನ ಪತ್ರವನ್ನು ಕಳುಹಿಸಿಕೊಟ್ಟಿದ್ದೇವೆ. ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

+**ಶ್ರೀ ಡಿ. ನಾರಾಯಣ ದಾಸ್ :-** ಈ ಒಂದು ಪ್ರಕರಣದ ಬಗ್ಗೆ ತಾರೀಖು 5-1-94 ರಲ್ಲಿ ನಾನು ಮೇಲ್ಮನೆಯ ಸದಸ್ಯನಾಗಿದ್ದಾಗ ಪ್ರಸ್ತಾಪಿಸಿದಾಗ ಆಗಿನ ಪಂಚಾಯತ್ ರಾಜ್ ಮಂತ್ರಿಗಳು ಉತ್ತರ ಕೊಟ್ಟರು. ಇದನ್ನು ಲೋಕಾಯುಕ್ತಕ್ಕೆ ನಾವು ಕಳುಹಿಸಿದ್ದೇವೆಂದು ಹೇಳಿದರು. ಆದರೆ ಈಗಾಗಲೇ ಸುಮಾರು ಒಂದು ವರ್ಷ ಎಂಟೊಂಭತ್ತು ತಿಂಗಳಾಯಿತು. ಇದರ ಬಗ್ಗೆ prima facie case has been made out ಎಂದು ಅವರೇ ಒಪ್ಪಿಕೊಂಡಿದ್ದಾರೆ. ಲೋಪವಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಒಂದು ವರ್ಷ ಒಂಭತ್ತು ತಿಂಗಳಾದರೂ ಕೂಡ ಏಕೆ ಲೋಕಾಯುಕ್ತದಿಂದ ವರದಿ ಬರಲಿಲ್ಲ? ಅದನ್ನು ಯಾವಾಗ ತರಿಸುತ್ತೀರಿ? ಈಗ ದುರುಪಯೋಗವಾಗಿರತಕ್ಕ ಬೋರ್‌ವೆಲ್‌ಗಳು ಏನಿವೆ ಅವುಗಳನ್ನು ಹಳ್ಳಿಹಳ್ಳಿಗೆ ಹಾಕಿದ್ದು ಸರ್ಕಾರದ ಹಣದಿಂದ ; ಆದರೆ ಮಾಜಿ ಶಾಸಕರು ತಮ್ಮ ಸ್ವಂತ ಜಮೀನಿನಲ್ಲಿ ಅವುಗಳನ್ನು ಕೊರೆಯಿಸಿಕೊಂಡು ಆಮೇಲೆ ಜಿಲ್ಲಾಪರಿಷತ್ತಿನ ಪೈಪುಗಳನ್ನು ಹಾಕಿಕೊಂಡು ಸುಮಾರು ಒಂದೆರಡು ಕಿಲೋಮೀಟರ್ ಪೈಪ್‌ನಲ್ಲಿ ನೀರು ತೆಗೆದುಕೊಂಡು ಹೋಗಿ ನೀರಾವರಿ ಮಾಡುತ್ತಿದ್ದಾರೆ. ಸುಮಾರು 3 ವರ್ಷಗಳಿಂದಲೂ, ಇದು ಇಷ್ಟು ಗಂಭೀರ ಪ್ರಶ್ನೆ ಇದ್ದರೂ ಕೂಡ ಸರ್ಕಾರದವರು ಇದರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಈ ಹಳ್ಳಿಗಳಲ್ಲಿರತಕ್ಕ ಬೋರ್‌ವೆಲ್‌ಗಳು ಏನು ದುರುಪಯೋಗವಾಗಿವೆ ಎಂದು ಕಂಡುಬಂದಿದೆ ಅದೇ ಬೋರ್‌ವೆಲ್‌ಗಳನ್ನು ಆ ಗ್ರಾಮಗಳಿಗೆ ಉಪಯೋಗವಾಗುವಂತೆ ಮಾಡಬಹುದಲ್ಲಾ ಸರ್ಕಾರದವರು. ಆದಕ್ಕೆ ಈಗ ಆ ಪಟ್ಟಾ ಜಮೀನಿನಲ್ಲಿ ಇರತಕ್ಕ ಜಮೀನುಗಳನ್ನು ತಾವು ಯಾವರೀತಿ ವಶಪಡಿಸಿಕೊಳ್ಳುತ್ತೀರಿ? ಅದನ್ನು ವಶಪಡಿಸಿಕೊಂಡು ಸಂಬಂಧಪಟ್ಟ ಹಳ್ಳಿಗಳಿಗೆ ಕುಡಿಯುವ ನೀರಿನ ಸ್ಕೀಮ್‌ಗಳನ್ನು ಮಾಡಬೇಕು ತಾವು. ಆಗ ಇದು ಸಾರ್ಥಕವಾಗುತ್ತದೆ. ಆದ್ದರಿಂದ ಲೋಕಾಯುಕ್ತ ವರದಿಯನ್ನು ಯಾವಾಗ ತರಿಸುತ್ತೀರಿ? ಸುಮಾರು 1 ವರ್ಷ 9 ತಿಂಗಳಾದರೂ ಇಷ್ಟು ತಡವಾಗುವುದಕ್ಕೆ ಕಾರಣ ಏನು? ಇದ್ಕಕೆ ತಾವು ಉತ್ತರಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಶಾಸಕರನ್ನು ಅಭಿನಂದಿಸುತ್ತೇನೆ. ಅವರು ಹಿಂದೆ ಕೂಡ ಇದರ ಬಗ್ಗೆ ಬಹಳ ಹೋರಾಟವನ್ನು ಮಾಡಿದ್ದರು. ಮತ್ತು ನಾವು ಕೂಡ ಸಾರ್ವಜನಿಕ ಸಭೆಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆವು. ಒಂದಲ್ಲ, ಎರಡಲ್ಲ, ಮೂವತ್ತನಾಲ್ಕು ಕೊಳವೆಭಾವಿಗಳನ್ನು ಖಾಸಗಿ ಹೊಲದಲ್ಲಿ ಹಾಕಿಸಿಕೊಂಡು ಸಂಪೂರ್ಣವಾಗಿ ನೀರಾವರಿಯನ್ನು ಮಾಡಿಕೊಂಡಿದ್ದಾರೆ. ಇದು ತೀರಾ ಗುರುತರ

ವಾಗಿರತಕ್ಕ ಅಪಾದನೆ. ಹಿಂದೆ ಅವರನ್ನು ಉಳಿಸಬೇಕು ಎಂಬ ಒಂದೇ ಕಾರಣಕ್ಕಾಗಿ ಏಕೆಂದರೆ ಅವರು ಒಂದು ಕಾಂಗ್ರೆಸ್ ಪಕ್ಷದ ಆಂತರಿಕ ಜಗಳದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಜೊತೆಗಿದ್ದರು ಎನ್ನುವ ಕಾರಣಕ್ಕಾಗಿಯೇ ಒಂದು ವರ್ಷದವರೆಗೆ ಆ ಕಡತದ ಬಗ್ಗೆ ಯಾವುದೇ ವಿಲೇವಾರಿಯನ್ನು ಮಾಡದೆ ಆಮೇಲೆ ಕಣ್ಣೊರೆಸುವ ಕೆಲಸವಾಗಿ ಮೇಲ್ಮನೆಯಲ್ಲಿ ಮಾನ್ಯ ಸದಸ್ಯರು ಸದಸ್ಯರಾಗಿದ್ದ ಸಂದರ್ಭದಲ್ಲಿ ಪ್ರಶ್ನೆಯನ್ನು ಎತ್ತಿದಾಗ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಬಹಳ ವಿಂಡತುಂಡವಾಗಿ ಮಾತನಾಡಿದಮೇಲೆ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲದಂಥ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಲೋಕಾಯುಕ್ತಕ್ಕೆ ಅವರು ಕಳುಹಿಸಿಕೊಟ್ಟರು. ಆದಾದಮೇಲೆ ಇಲ್ಲಿಯವರೆಗೂ ಕೂಡ ಬಂದಿಲ್ಲ. ಒಂದು ಸಲ ಲೋಕಾಯುಕ್ತಕ್ಕೆ ಕಳುಹಿಸಿಕೊಟ್ಟಿರತಕ್ಕ ಪ್ರಸ್ತಾವೆಯನ್ನು ನಾವು ವಾಪಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆ ಕಾರಣಕ್ಕಾಗಿಯೇ ಲೋಕಾಯುಕ್ತಕ್ಕೆ ಜ್ಞಾಪನಾಪತ್ರವನ್ನು ನಾವು ಈಗಾಗಲೇ ಬರೆದು ಕಳುಹಿಸಿದ್ದೇವೆ. ಇನ್ನು ಎರಡನೆಯದಾಗಿ ಅವರು ಎತ್ತಿರವಂಥ ಪ್ರಶ್ನೆ ಈಗಲೂ ಕೂಡ ಅವರು ತಮ್ಮ ಖಾಸಗಿ ಜಮೀನಿನಲ್ಲಿ ನೀರಾವರಿ ಮಾಡಿಕೊಳ್ಳುತ್ತಿದ್ದಾರೆ ಎಂದು. ಅವರು ತಮ್ಮದಾಗಿರತಕ್ಕ ಒಂದು ಮುಚ್ಚಳಿಕೆಯನ್ನು ಬರೆದುಕೊಟ್ಟದ್ದಾರೆ ಎನ್ನುವಂಥ ಕಾಗದಪತ್ರಗಳೆಲ್ಲವೂ ಕೂಡ ಈಗ ಲೋಕಾಯುಕ್ತದ ವಶದಲ್ಲಿದೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಮಾಡಿಕೊಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಸೂಚನೆ ಕಳುಹಿಸಿಕೊಟ್ಟಿದ್ದೇನೆ. ಒಂದು ವೇಳೆ ಕಾನೂನಿನ ಪ್ರಕಾರ ಆಗುವುದಿಲ್ಲ ಅಂದರೆ ಅಷ್ಟುಮಟ್ಟಿಗೆ ಇರತಕ್ಕ ಜಾಗ ಅವುಗಳನ್ನು ನಾವು ಸರ್ಕಾರದ ವತಿಯಿಂದ ಭೂಸ್ವಾಧೀನ ಕ್ರಮ ತೆಗೆದುಕೊಂಡು ಖಾಸಗಿಯಾಗಿರತಕ್ಕ ಜಮೀನನ್ನು ಸರ್ಕಾರದ ಜಮೀನು ಎಂದು ಪರಿವರ್ತಿಸಿಕೊಂಡು ಆ ಗ್ರಾಮಾಂತರ ಜನಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವ ಬಗ್ಗೆ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಸದನದ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ನಾರಾಯಣ ದಾಸ್ :- ಈ ಲೋಕಾಯುಕ್ತ ವರದಿಯನ್ನು ಯಾವಾಗ ತರಿಸುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಲಿಲ್ಲ. ಆದಷ್ಟು ಬೇಗನೆ ಯಾವಾಗ ತರಿಸುತ್ತೀರಿ? ಏಕೆಂದರೆ ಈಗಾಗಲೇ ಎರಡು ಮೂರು ವರ್ಷಗಳಿಂದ ಅಲ್ಲಿನ ಎಲ್ಲಾ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರ ಆಗಿ ಅಲ್ಲಿನ ಎಲ್ಲಾ ಜನರಿಗೆ ಗೊತ್ತಿದೆ ಈ ವಿಚಾರ. ಕುಡಿಯುವ ನೀರಿನ ಬಾವಿಗಳು, ಶಾಲಾಕಟ್ಟಡಗಳದ್ದು ಇದೂ ಕೂಡ ದುರುಪಯೋಗ ಮಾಡಿಕೊಂಡಿರುವುದು ಗೊತ್ತಿದೆ. ಇಷ್ಟು ಗೊತ್ತಿದ್ದರೂ ಕೂಡ ಈ ಸರ್ಕಾರ ಬಂದು 9-10 ತಿಂಗಳಾದರೂ ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ ಅಂದರೆ ಬಹಳ ಅಸಾಧ್ಯವಾದಂಥ ಕೆಲಸ ನಮಗೆ ನಂಬುವುದಕ್ಕೇ ಆಗುವುದಿಲ್ಲ. ಆದ್ದರಿಂದ ಅವರ ಬಗ್ಗೆ ನಿಮಗೇನಾದರೂ ಅಭಿಮಾನ ಇದೆಯಾ? ಈಗಲೇ ಅದನ್ನು ವಶಕ್ಕೆ ತೆಗೆದಕೊಂಡು ಕೇಸ್ ಬಗೆಹರಿಸುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಂ. ಪಿ. ಪ್ರಕಾಶ್ :- ಸನ್ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಅವರಿಗೆ ಶಾಸಕರಿಗೆ ಗೊತ್ತಿದೆ. ಲೋಕಾಯುಕ್ತಕ್ಕೆ ಹೋದಮೇಲೆ ನಾವು ಆ ಪ್ರಸ್ತಾವನೆಯನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾವು ಅವರಿಗೆ ಜ್ಞಾಪನಾಪತ್ರವನ್ನು ಕಳುಹಿಸಿಕೊಡಬೇಕು. ಮತ್ತೆ ಸಾಧ್ಯವಾದರೆ ಈ ವಿಚಾರದಲ್ಲಿ ನೇರವಾಗಿ ಅವರ ಜೊತೆಯಲ್ಲಿ ಮಾತನಾಡುತ್ತೇನೆ. ಇದಕ್ಕಿಂತ ಹೆಚ್ಚು ಕ್ರಮ ತೆಗೆದುಕೊಳ್ಳುವುದಕ್ಕೆ ಸಧ್ಯಕ್ಕೆ ಆಗುವುದಿಲ್ಲ ಲೋಕಾಯುಕ್ತದಲ್ಲಿ. ಇದು ಬೇಗನೇ ಮುಗಿದ ತಕ್ಷಣ ಸಂಬಂಧಪಟ್ಟವರ ಮೇಲೆ ಕಾನೂನಿನ ಪ್ರಕಾರ ನಾನು ಕ್ರಮ ತೆಗೆದು ಕೊಳ್ಳುತ್ತೇನೆಂದು ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಡಿ. ನಾರಾಯಣ ದಾಸ್ :- ಸ್ವಾಮಿ, ಬೋರ್‌ವೆಲ್ ಇದೆಯಲ್ಲಾ ಅದು ಗೊತ್ತಾಗಿದೆ ನಿಮಗೆ ಅದನ್ನು ನಿಮ್ಮ ವಶಕ್ಕಾದರೂ ತೆಗೆದುಕೊಳ್ಳಿ. ಹಳ್ಳಿಗಳಿಗೆ ಕುಡಿಯುವ ನೀರಿಗೆ ಕೊಡಿ. ಕುಡಿಯುವ ನೀರಿನ ಅನುಕೂಲ ಮಾಡಿಕೊಟ್ಟಂತಾಗುತ್ತದಲ್ಲ ಹಳ್ಳಿಗಳಿಗೆ.

ಶ್ರೀ ಎಂ. ಪಿ. ಪ್ರಕಾಶ್ :- ಸನ್ಮಾನ್ಯ ಅಧ್ಯಕ್ಷರೇ, ಆ ಖಾಸಗಿ ಹೊಲದಲ್ಲಿ ನೀರು ಕೊಡುವುದಕ್ಕೆ ಮತ್ತು ಬೋರ್‌ವೆಲ್ಲನ್ನು ತೆಗೆಯಲಿಕ್ಕೆ ನಮ್ಮ ಒಪ್ಪಿಗೆ ಇದೆ ಎಂದು ಅವರು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ ಎನ್ನತಕ್ಕ ಒಂದು ಪ್ರಸ್ತಾವ ಇದೆ. ಆ ಕಾಗದ ಪತ್ರಗಳೆಲ್ಲವೂ ಕೂಡ ಲೋಕಾಯುಕ್ತದ ವಶದಲ್ಲಿರುವುದರಿಂದ ಈಗ ಹೊಸದಾಗಿ ಬಂದಿರತಕ್ಕ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹತ್ತಿರ ಯಾವ ಕಾಗದಪತ್ರಗಳೂ ಇಲ್ಲ. ಅದನ್ನು ವಿಚಾರ ಮಾಡಿಕೊಂಡು ತಾವು ಕ್ರಮ ಕೈಗೊಳ್ಳಿ, ಒಂದು ವೇಳೆ ಅದು ಅಕಸ್ಮಾತ್ ಆಗದೇ ಹೋದರೆ ಆ ಭಾಗವನ್ನಾದರೂ ಭೂಸ್ವಾಧೀನ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೇನೆ. ಒಂದು ವೇಳೆ ಏನಾಗದಿದ್ದರೂ ಕೂಡ ನಮ್ಮ ನಮ್ಮ ಪೈಪ್‌ಲೈನ್‌ಗಳನ್ನು ಪಂಪ್‌ಗಳನ್ನಾದರೂ ಕೂಡ ವಾಪಸ್ ತೆಗೆದುಕೊಂಡು ಬರುತ್ತೇವೆ. ಇಷ್ಟನ್ನು ಮಾತ್ರ ನಾನು ಭರವಸೆ ಕೊಡಬಲ್ಲೆ. ಬೇರೆ ಕಡೆ ಕೂಡ ನಾವು ಬೋರ್ ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಯು. ಆರ್. ಸಭಾಪತಿ :- ಸನ್ಮಾನ್ಯ ಉಪಾಧ್ಯಕ್ಷರೇ.....

ಉಪಾಧ್ಯಕ್ಷರು :- ಬರುವುದಿಲ್ಲ ರೀ, ಸಭಾಪತಿಯವರೇ ಬರುವುದಿಲ್ಲ.

ಶ್ರೀ ಯು. ಆರ್. ಸಭಾಪತಿ :- ಈ ವಿಚಾರ ಅಲ್ಲ.

ಉಪಾಧ್ಯಕ್ಷರು :- ಹಾಗೆ ಕೇಳುವುದಕ್ಕೆ ಬರುವುದಿಲ್ಲ.

ಶ್ರೀ ಯು. ಆರ್. ಸಭಾಪತಿ :- ನಿನ್ನೆ ಒಂದು ಪ್ರಸ್ತಾವನೆ ಮಾಡಿದ್ದೆ ಈ ಸಭೆಯಲ್ಲಿ.

ಉಪಾಧ್ಯಕ್ಷರು :- 351 ರ ಅಡಿಯಲ್ಲಿ ಬರುವ ಸೂಚನೆಗಳು. ಕೆ. ಎಂ. ಕೃಷ್ಣ ಮೂರ್ತಿಯವರು.

ಶ್ರೀ ಯು. ಆರ್. ಸಭಾಪತಿ :- ಉಪಾಧ್ಯಕ್ಷರೇ, ಒಂದು ವಿಚಾರ.....

ಉಪಾಧ್ಯಕ್ಷರು :- ಯಾವುದೋ ವಿಷಯವನ್ನು ಹಾಗೆ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಅವರು ಎತ್ತುತ್ತಿರುವ ವಿಷಯ ಏನೆಂದರೆ ಸದನಕ್ಕೆ ಬಹಿಷ್ಕಾರ ಹಾಕಿ ಹೊರಗಡೆ ಹೋಗಿರುವವರು ನಿನ್ನೆಯೂ ಸಹಿ ಮಾಡಿದ್ದರು, ಇವತ್ತೂ ಮಾಡಿದ್ದಾರೆ. ಈ ವಿಚಾರ ಪ್ರಸ್ತಾಪ ಮಾಡಿದ್ದರೂ ಉತ್ತರ ಬರಲಿಲ್ಲ. ಅದರ ಬಗ್ಗೆ ಮಾಹಿತಿ ಕೊಡಬೇಕು.

ಒಬ್ಬ ಮಾನ್ಯ ಸದಸ್ಯರು :- ಇದು ಬಹಳ ಗಂಭೀರವಾದ ಸಮಸ್ಯೆ.

ಶ್ರೀ ಯು. ಆರ್. ಸಭಾಪತಿ :- ಸರ್ಕಾರದಿಂದ ಭತ್ಯವನ್ನು ಕೊಡಲಾಗುತ್ತದೆ. ಅವರು ಹಾಜರಿ ಪಟ್ಟಿಗೆ ಹಾಜರಿ ಹಾಕಬಹುದಾ ಎಂಬ ಬಗ್ಗೆ ತಾವು ಮಾಹಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.